


International Journal of Kannada Research
www.kannadajournal.com

**ISSN: 2454–5813**
IJKR 2017; 3(3): 98-101
© 2017 IJKR
www.kannadajournal.com
Received: 20-05-2017
Accepted: 21-06-2017

**ಬಸವರಾಜ ಚಂದ್ರಕಾಂತ ಭಾಸ್ಕರ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**Correspondence**
**ಬಸವರಾಜ ಚಂದ್ರಕಾಂತ ಭಾಸ್ಕರ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

# ಗೀತಾ ನಾಗಭೂಷಣರವರ ಕಥೆಗಳಲ್ಲಿ ಮಹಿಳಾ ಸಂಘರ್ಷ

**ಬಸವರಾಜ ಚಂದ್ರಕಾಂತ ಭಾಸ್ಕರ್**

ಸಾಹಿತ್ಯ ಜೀವನಾನುಭವದ ಅಭಿವ್ಯಕ್ತಿ, ಸೃಜನಶೀಲ ಮನಸ್ಸಿನ ಲೇಖಕ ತನ್ನ ಸ್ವಾನುಭವ, ತಾನು ಕಂಡದ್ದು, ಕಲ್ಪಿಸಿದ್ದು ಬರಹರೂಪದಲ್ಲಿ ಕಲಾತ್ಮಕವಾಗಿ ನಿರೂಪಿಸುವನು. ಸಾಹಿತ್ಯ ಜೀವನನಾನುಭವದ ಗರಡಿಯಲ್ಲಿಯೇ ಸೃಷ್ಟಿಯಾಗುವಂತಹದು, ಜೀವನಾನುಭವಕ್ಕೆ ಹೊರತಾದ ಸಾಹಿತ್ಯ ಪರಿಣಾಮಕಾರಿಯಾಗಲಾರದು ಈ ದೃಷ್ಟಿಯಿಂದ ಜೀವನ ಮತ್ತು ಸಾಹಿತ್ಯ ಒಂದು ನಾಣ್ಯದ ಎರಡು ಮುಖಗಳಾಗಿವೆ.
"ಗೀತಾ ನಾಗಭೂಷಣರವರು ಬರೆಯಲು ಪ್ರಾರಂಭಿಸಿದ್ದು ೬೦ ರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ ಇವರಿಗಿಂತಲೂ ಮೊದಲು ಅನೇಕ ಲೇಖಕಿಯರು ಜನಪ್ರಿಯ ಕಥೆ ಕಾದಂಬರಿಗಳನ್ನು ರಚಿಸಿತೊಡಗಿದ್ದರೂ, ಅದೇ ಸಂದರ್ಭದಲ್ಲಿ ಗೀತಾ ನಾಗಭೂಷಣವರ ಬರವಣಿಗೆಯಲ್ಲಿ ಅದೇ ಜಾಡಿನ ಜನಪ್ರಿಯ ಸೌಂದರ್ಯ ನಾಯಕಿಯರ ತಳಕು ಬಳಕು ಫೈವ್‌ಸ್ಟಾರ್ ಹೋಟೆಲು, ಕ್ಲಬ್ ಇವುಗಳ ವರ್ಣನೆಯೇ ಮೂಲವಾಗಿ ಕಂಡು ಲೇಖಕಿ ಗೀತಾನಾಗಭೂಷಣರಿಗೆ ಈ ಬರವಣಿಗೆ ತೃಪ್ತಿಕೊಡದಾಯಿತು. ಚೆಲುವು ಹೂವುಗಳಗಿಂತ ಹೆಚ್ಚಾಗಿ ಮುಳ್ಳುಗಳು ನಲಿವುಗಳಗಿಂತ ಜಾಸ್ತಿಯಾಗಿ ನೋವುಗಳು, ಸಂಕಟಗಳು, ದೌರ್ಜನ್ಯಗಳು, ಅನ್ಯಾಯ, ಅತ್ಯಾಚಾರಗಳು, ಹಿಂಸೆ ಕ್ರೌರ್ಯ, ಶೋಷಣೆ, ದಬ್ಬಾಳಿಕೆ, ಮೌಢ್ಯ, ಕಂದಾಚಾರಗಳ ಕುರಿತು ಬರೆಯುವಂತೆ ನನ್ನ ಮನಸ್ಸು ಗುದ್ದ ತೊಡಗಿದವು ಎಂದು ಅವರೆ ನಾನು ಮತ್ತು ನನ್ನ ಸಾಹಿತ್ಯ ಗೀತಾನಾಗಭೂಷಣ ಪುಟ ೬೦ ರಲ್ಲಿ ಹೇಳಿಕೊಂಡಿದ್ದಾರೆ"[೧]. ನಾಡೋಜ ಗೀತಾ ನಾಗಭೂಷಣರವರು ೨೦೧೨ ರಲ್ಲಿ 'ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ' ಸಮಗ್ರ ಕಥೆಗಳು ಎಂಬ ಕಥಾ ಸಂಕಲನವನ್ನು ಹೊರತಂದಿದ್ದು, ಈ ಕಥಾ ಸಂಕಲನವು ೫೩ ಕಥೆಗಳನ್ನು ಒಳಗೊಂಡಿದೆ. ಗೀತಾ ನಾಗಭೂಷಣರ ಬಹುಪಾಲು (ತೊಂಬತ್ತರಷ್ಟು) ಕಥೆ ಕಾದಂಬರಿಗಳು ಹೆಣ್ಣು ಮಕ್ಕಳನ್ನು ಹಾಗೂ ಅವರ ಸಮಸ್ಯೆಗಳನ್ನು ಕುರಿತೇ ರಚನೆಗೊಂಡಿವೆ. ಝೋಪಡಿ ಪಟ್ಟಿಯ ಕೆಳವರ್ಗದ ಹೆಂಗಸರನ್ನ ಶೋಷಿಸಿದಷ್ಟು, ಮೇಲ್ವರ್ಗದವರು ಬೇರಾರನ್ನು ಶೋಷಿಸಲಿಲ್ಲವೆಂಬ ಅವರ ಅಭಿಪ್ರಾಯವನ್ನು ನಿರ್ಮಳವಾಗಿ ಹೇಳಿದ್ದಾರೆ.
ಗೀತಾ ನಾಗಭೂಷಣರವರ 'ಮಟದಯ್ಯ ಮತ್ತು ಧರ್ಮ' ಎಂಬ ಕಥೆಯಲ್ಲಿ ಭೀಮಾನದಿ ದಂಡೆಯ ಹುಣಸೆ ಮೆಳೆಗಳ ಬಾಜು ಇರುವ ಹಳ್ಳಿಯೇ ನವಿಲೂರು. ಸಂಸಾರಿಗಳಿಗೆ ಸಂಸ್ಕಾರ ನೀಡಬೇಕಾದ ಕೇಂದ್ರಗಳಾದ ಮಠಗಳು ತದ್ವಿರುದ್ಧವಾಗಿ ಸನ್ಯಾಸಿ ಮಠಗಳಲ್ಲೇ ಸಂಸಾರ ಮಾಡುವ ಸ್ವಾಮಿಜಿಗಳಿಗೇನು ಕೊರತೆ ಇಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು. ಮುರುಗಯ್ಯ ಸ್ವಾಮಿ ಹುಟ್ಟು ಸನ್ಯಾಸಿಯಾಗಿದ್ದು, ದಿಕ್ಕಿಲ್ಲದ ರಂಡೆಮುಂಡಿ ಹೆಣ್ಣು, ಗಂಡ ಸತ್ತು ಎರಡೋರ್ಷ ಆಗಿದ್ದ ಶಿವಿಯನ್ನು ಕಾಮುಕ ಮಟದಯ್ಯನು ಬಲೆಗೆ ಹಾಕಿಕೊಂಡು, ಕದ್ದು ಮುಚ್ಚಿ ಕೂಡಲು ಗರ್ಭವತಿಯಾದ ಶಿವಿಯನ್ನು ಮತ್ತು ತುರುಕರ ಖಾಸೀಮನನ್ನು ಬಂಬೈ ಶಹರಕ್ಕೆ ರೊಕ್ಕ ರೂಪೈ ಕೊಟ್ಟು ಕಳುಹಿಸುತ್ತಾನೆ. ಮಗು ಜನಿಸಿದ ಮೇಲೆ ಬರಲು ಹೇಳಿ ಹುಟ್ಟಿದ ಮಗು ತನ್ನದೇ ಎಂದು ಹೇಳಬಾರದೆಂದು ತಾಕಿತ್ತು ಮಾಡುತ್ತಾನೆ. ಮುಂದೆ ಗಂಡು ಮಗು ಜನಿಸಿದಾಗ ಖಾಸೀಮಸಾಬನು ಊರಿಗೆ ಬಂದು ಮಗುವನ್ನ ತನ್ನ ಹೆಂಡತಿ ಫಾತಿಮಾಳ ಮಡಿಲಿಗೆ ಹಾಕುತ್ತಾನೆ. ದಾರಿಯಲ್ಲಿ ಬರುವಾಗ ಸಿಕ್ಕಿದ ಮಗು ಅಂತ. ಅವನನ್ನೇ ಮಗನೆಂದು ಮುಸ್ಲಿಂ ಸಂಪ್ರದಾಯದಂತೆ ಬೆಳೆಸುತ್ತಾರೆ. ಆಗಾಗ ಮಠಕ್ಕೆ ಬರುತ್ತಿದ್ದ ಮಗ ಹಮೀದ ನನ್ನ ಕಂಡು ಶಿವಿ ಮುದ್ದಾಡಲು ಹೋದಾಗ ಬೇರೆಡೆ ಸರಿಯುತ್ತಿದ್ದ, ಇದನ್ನು ಕಂಡ ಶಿವಿ ತನ್ನ ಕರುಳಬಳ್ಳಿ ಕಣ್ಣೆದುರಿದ್ದರೂ ಕೂಡಾ ಅದು ತನ್ನದೆಂದೂ ಹೇಳಿಕೊಳ್ಳಲೂ ಆಗದೇ ವಿಲಿ ವಿಲಿ ಒದ್ದಾಡುವ ಅವಳ ಮಾನಸಿಕ ಸಂಘರ್ಷ ಯಾರಿಗೂ ತಿಳಿಯದೇ ಹೋಗುವುದು. ಜ್ಯಾಗರ್‌ರವರು ಹೇಳುವಂತೆ. "ಸ್ತ್ರೀಯರು ತಮ್ಮ ದೇಹದಿಂದ ಪ್ರತ್ಯೇಕಿಸಲ್ಪಟ್ಟ ಭಾವನೆಯನ್ನೇ ಅನುಭವಿಸುತ್ತಾರೆ.

ತನ್ನ ದೇಹ ಯಾತಕ್ಕಾಗಿ, ಯಾರಿಂದ ಹಾಗೂ ಹೇಗೆ ಬಳಸಲ್ಪಡಬೇಕು ಎಂದು ನಿರ್ಧರಿಸುವಲ್ಲಿ ಆಕೆಗೆ ಸ್ವಾತಂತ್ರ್ಯವೇ ಇಲ್ಲ"[3] ಇಂದಿನ ಸಂದರ್ಭದಲ್ಲಿಯೂ ಸ್ತ್ರೀ ಎಂಬುವವಳು ಪುರುಷನ ಸೊತ್ತಾಗಿದ್ದು, ಅವನು ಬಳಸಿಕೊಂಡಂತೆ ವರ್ತಿಸಬೇಕಾಗಿರುವುದು ವಿಪರ್ಯಾಸ ಸಂಗತಿಯಾಗಿದೆ.

'ಅವ್ವ ಎಂಬ ಕತೆಯಲ್ಲಿ ಗಂಗಾ ತನ್ನ ರೋಗಿಷ್ಟ ಮಗುವನ್ನು ಎತ್ತಿಕೊಂಡು ಕಲಬುರಗಿಯ ಸರಕಾರಿ ಆಸ್ಪತ್ರೆಗೆ ಬಂದಾಗ ಹೊರಗಿನಿಂದ ಔಷಧಿ ತರಲು ಚೀಟಿ ಬರೆದು ಕೊಟ್ಟಾಗ ಬರಿಗೈಯಲ್ಲಿದ್ದ ನಿರ್ಗತಿಕ ಹೆಣ್ಣು ಗಂಗಾ ತನ್ನ ಮಗನ ಔಷಧಿಕ್ಕೊಸ್ಕರ ಕಂಡವರ ಕಾಲು ಬಿದ್ದರೂ ಕರುಣೆಯ ಕಣ್ಣಿನಿಂದ ನೋಡದೇ ಕಾಮದ ಕಣ್ಣಿನಿಂದ ನೋಡಿ ಸಹಾಯ ಮಾಡುವ ಇಂಥ ಪುರುಷರಿರುವ ಈ ಸಮಾಜದಲ್ಲಿ ಹೆಣ್ಣು ಹೇಗೆ ಸುಖವಾಗಿರಲು ಸಾಧ್ಯ ಎಂಬುದನ್ನು ಮರೆಯುವಂತಿಲ್ಲ. ಬಡತನದ ಬವಣೆಯಲ್ಲಿರುವ ಗಂಗಾ ತನ್ನ ಮಗನ ಔಷಧಿಗೊಸ್ಕರ ರೂಪೈ ಕೊಡಿ ಎಂದು ಕಂಡವರ ಕಾಲು ಬಿಳುತ್ತಿವುದನ್ನು ಕಂಡು ಅಲ್ಲಿದ್ದ ಮಹಾಶಯನೊಬ್ಬ ಇವಳ ಪರಿಸ್ಥೀತಿಯನ್ನು ಉಪಯೋಗಿಸಿಕೊಳ್ಳಲು ಯೋಚಿಸಿ ತಾನು ಹೇಳಿದಂತೆ ಕೇಳಿದರೆ ರೂಪೈ ಕೊಡುವುದಾಗಿ ಕಾರಿನೊಳಗೆ ಕೂಡಿಸಿಕೊಂಡು ಹೋಗಿ ತನ್ನ ಇಚ್ಛೆ ಇಡೆರಿಸಿಕೊಳ್ಳುತ್ತಿರುವಾಗ ತನ್ನ ಶೀಲಕ್ಕಿಂತ ತನ್ನ ಕರುಳುಬಳ್ಳಿಯೇ ಹೆಚ್ಚೆಂದು ದುಃಖ ಉಕ್ಕಿ ಬಂದರು ನುಂಗಿ ತನ್ನ ಮಗು ಉಳಿದರೆ ಸಾಕು ಎಂದುಕೊಳ್ಳುವಳು. ಔಷಧಿ ತರುವಷ್ಟರಲ್ಲಿ ಸರಿಯಾದ ಸಮಯಕ್ಕೆ ಚಿಕಿತ್ಸೆಯಾಗದ ಕಾರಣಕ್ಕೆ ಏಕಕಾಲದಲ್ಲಿ ತನ್ನ ಮೈಯನ್ನು ತನ್ನ ಮಗನನ್ನು ಕಳೆದುಕೊಂಡು ಗೋಗರೆಯುತ್ತಾ ಆಸ್ಪತ್ರೆ ಎದುರು ಹೊರಳಾಡಿದರೂ ಒಂಟಿ ಹೆಂಗಸ್ಸು ಗಂಗಾಳ ಗೋಳು ಈ ಸಮಾಜದ ಯಾರೊಬ್ಬರಿಗೂ ಅರ್ಥವಾಗದೇ ಹೋಗುತ್ತದೆ. ಅನಕ್ಷರತೆ, ಬಡತನ, ನಿರುದ್ಯೋಗ, ಅನಾರೋಗ್ಯ, ಹಸಿವು, ಜಾತಿಯತೆ ತುಂಬಿ ತುಳುಕಾಡುತ್ತಿರುವ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯವಾಗಿವೆ. ಇಂಥಹ ಹತ್ತು ಹಲವಾರು ಘಟನೆಗಳು ಇಂದಿಗೂ ಕೂಡಾ ದಿನಂಪ್ರತಿ, ಪತ್ರಿಕೆಗಳಲ್ಲಿ, ಟಿ.ವಿ. ಗಳಲ್ಲಿ ಕಾಣುವುದು ಸಹಜವಾಗಿದೆ.

'ದಾಳ' ಎಂಬ ಕಥೆಯಲ್ಲಿ ಕಾಶಿಯು ತನ್ನದಲ್ಲ ತಪ್ಪಿಗೆ ತಾನು ಬಂಜೆಯೆಂಬ ಹೆಸರು ಪಟ್ಟಿಯನ್ನು ಕಟ್ಟಿಕೊಂಡು, ಕೈಲಾಗದ ಗಂಡ ಗೆಂಡೆಪ್ಪ ತನ್ನನ್ನು ದೂರ ತಳ್ಳಿ ಪರಸ್ತ್ರೀಯರ ಸಂಘ ಮಾಡಿ ತಿರುಗುತ್ತಿದ್ದರೂ ಸಹಿಸಿಕೊಂಡು ಬಾಳ್ವೆ ಮಾಡಿದಳು. ಒಂದು ದಿನ ಪಂಚಾಯತಿ ಕರೆಯಿಸಿದಾಗ ಗಂಡ ಹೆಂಡತಿಯರಿಬ್ಬರಿಗೂ ಫಾರಿಕತಿ ಕೊಡಿಸಿದರು. ತಾನು ಇದೇ ಊರಲ್ಲಿ ಇದ್ದು ಒಳ್ಳೆ ಗರತಿಯಾಗಿ ಬದುಕಿ ತೊರಿಸಬೇಕೆಂದು ಪಣ ತೊಟ್ಟು ಜೀವನ ಮಾಡುತ್ತಿದ್ದಳು. ಪಂಚಾಯತಿ ಇಲೇಕ್ಷನ್ ಬಂದಾಗ ಊರ ಮಾಲಿಗೌಡನ ಮತ್ತು ಸುತ್ತಮುತ್ತಲಿನ ಮಹಿಳೆಯರ ಒತ್ತಾಯಕ್ಕೆ ಮಣಿದು ಇಲೇಕ್ಷನ್‌ಗೆ ನಿಲ್ಲುತ್ತಾಳೆ. ಇವರ ವಿರುದ್ಧ ಅವಳ ಗಂಡ ಗೆಂಡೆಪ್ಪನನ್ನ ಪೊಲೀಸ್ ಪಾಟೀಲ ಗೌಡರು ನಿಲ್ಲಿಸುತ್ತಾರೆ. ತನ್ನ ವಿರುದ್ಧ ನಿಂತಿದ್ದ ಕಾಶಿಯನ್ನು ನಾಮಪತ್ರ ವಾಪಸ್ಸು ತೆಗೆದುಕೊಳ್ಳುವಂತೆ ಹೇಳಿದಾಗ ಒಪ್ಪದಿದ್ದಾಗ ಕುಡಿದ ನಶೆಯಲ್ಲಿ ಪೊಲೀಸ್‌ಗೌಡನ ಕುಮ್ಮಕ್ಕಿನಿಂದ ಗೆಂಡೆಪ್ಪ ಕಾಶಿಯನ್ನು ಅತ್ಯಾಚಾರ ಮಾಡಿ, ಹತ್ಯೆಗೈಯುವ'ನು. ಎಂದಿಗಿದ್ರೂ ನಮ್ಮಂದೀದು ಇದೇ ಆಗ್ತದೋ ಯಣ್ಣಾ.... ಕೋಳಿಗೋಳಿಗಿ ಸಿಂದಿ ಕುಡ್ಸಿ ಕಚ್ಚಾಡ್ಲಕ ಬಿಟ್ಟಂಗ ಹಳ್ಯಾಗ ದೋ ಪಾರ್ಟಿ ಮಂದಿ, ಈ ನಮ್ಮಂದಿಗಿ ಎಲೆಕ್ಷನಿಗಿ ಬಿಡ್ತಾರ, ಆಯ್ತು, ಕಚ್ಚಾಡಿ ಸಾಯಾದು ಇದೇ, ಸಾಯೋ ಆಟದ ಮಜಾ ತಗೊಂಡು ಮೋಜ ಮಾಡಾದು ಮಾತರ, ಮ್ಯಾಲಿನ ಆ ದೋಪಾರ್ಟಿ ಮಂದಿನೇ..... ಈ ನಮ್ ಹೊಂಬ ಮಂದಿಗೆಂದ ಬುದ್ಧಿ ಬರ್ತಾದೋ ಏನೋ' ಎಂದು ಮಾದರ ಮರೆವ್ವಾಯಿ ತನ್ನಷ್ಟಕ್ಕೆ ತಾನೇ ಸಣ್ಣ ದನಿಯಲ್ಲಿ ಒಟ ಒಟ ಗುಟ್ಟುತ್ತ ಅಳುತ್ತಿದ್ದುದ್ದು ಆ ಗದ್ದಲದಲ್ಲಿ ಮಂದಿಗೆ ಕೇಳಿಸಲೇ ಇಲ್ಲ. ಮಾಲಿಗೌಡ ಮತ್ತು ಪೊಲೀಸ್ ಪಾಟೀಲರ ನಡುವಿನ ದ್ವೇಷ, ಅಸೂಯೆ ಮೊದಲಿನಿಂದಲೂ ಇದ್ದಿದ್ದು ಎಲ್ಲರಿಗೂ ತಿಳಿದೆ ಇತ್ತು. ಹೀಗೆ ಮೇಲ್ವರ್ಗದ ಜನರ ವೈಷಮ್ಯದ ನಡುವೆ; ಬಡ ಅಮಾಯಕರು ಬಲಿಯಾಗುವುದನ್ನು ಇಲ್ಲಿ ಕಾಣಬಹುದು.

"ಪ್ರಗತಿಶೀಲ ಮನೋಭಾವದ ಡಾ. ಅನುಪಮಾ ಅವರು ತಮ್ಮ ಕಥೆ ಕಾದಂಬರಿಗಳಲ್ಲಿ ಹೆಣ್ಣಿನ ಸಮಸ್ಯೆಗಳಿಗೆ ಅಡಿಪಾಯವಾಗಿರುವ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ದೃಷ್ಟಿಕೋನದ ವಿವೇಚನೆಯನ್ನು ಸಾಮಾಜಿಕ ನೆಲೆಗಟ್ಟಿನ ಮೇಲೆ ಮಾಡಿದ್ದರೆ, ಗೀತಾ ನಾಗಭೂಷಣವರು ಸ್ತ್ರೀಪಾತ್ರಗಳು ಎಲ್ಲೂ ಪರಿಸ್ಥಿತಿಯೊಂದಿಗೆ ರಾಜೀ ಮಾಡಿಕೊಳ್ಳದೆ ಪ್ರತಿಭಟಿಸುತ್ತವೆ ಮತ್ತು ಸಮಸ್ಯೆಗಳನ್ನು ಎದುರು ಹಾಕಿಕೊಂಡು ಪ್ರವಾಹದ ವಿರುದ್ಧ ಈಜಲು ಸಿದ್ಧವಾಗುವ ದಿಟ್ಟ ಪಾತ್ರಗಳು ಜೀವನ ಎದುರಿಸಲು ಧೈರ್ಯ ತುಂಬುತ್ತದೆ"[4] ಅನುಪಮಾ ಅವರು ಹೇಳುವಂತೆ ಪ್ರತಿಭಟನೆಯು ಅರ್ಥಪೂರ್ಣವಾಗಿದೆ.

'ಬದುಕು ನುಂಗುವ ಮಂದಿ' ಎಂಬ ಕಥೆಯಲ್ಲಿ 'ಕಜರಿ' ಎನ್ನುವ ಬಾಲಕಿ ತಂದೆ ತಾಯಿ ಇಲ್ಲದ ಅನಾಥೆ. ಕಲಬುರಗಿಯ ತಾರಫೈಲ್ ಗುಡಿಸಲುಗಳಲ್ಲಿ, ರೈಲ್ವೆ ಸ್ಟೇಷನ್‌ನಲ್ಲಿ ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದಾಗ ಒಂದು ದಿನ ಹಾರುವ ಮುದುಕಿ "ನಿಮಗ ಬಿಕ್ಕಿ ಬೇಡ್ಲಿಕ್ಕೇನು ಧಾಡಿ ಬಡದದಾ? ಕುಂಟ್ರಾ ಕುಡ್ರಾರಾ ನೀವು? ಹರೆಕ್ಕ ಬಂದೀರಿ. ದೇವರು ಕೈ ಕಾಲ ಕೊಟ್ಟಾನ ದುಡ್ಕೊಂಡು ತಿನ್ಬೇಕು. ಭಿಕ್ಷಾ ಬೇಡ್ತಾವ, ನಾಚಿಕೆಗ್ಗೇಡಿಗೊಳು..... ಹೋಗ್ತಿರ್ಯಾ ಇಲ್ಲಾ ಇಲ್ಲಿಂದ? ಹೂಂ.....ನಿಮ್ ಕಾಲ ಮುರಿತಿನಿ...." ಎನ್ನುತ್ತ ಬಡಿಗೆ ಹಿಡಿದುಕೊಂಡು ಬೆನ್ನು ಹತ್ತಿದಳು. ಇದರಿಂದ ಕಜರಿಗೆ ರಾತ್ರಿವಿಡಿ ನಿದ್ದೆ ಬರದೆ ಚಡಪಡಿಸಿದಳು. ಏನಾದರು ಧಂಧಾ ಮಾಡ್ಬೇಕು ಅಂತ ಕಸಮುಸರಿ ತೊಳೆಯು ಕೆಲಸಕ್ಕಾಗಿ ಮನೆಮನೆ ಅಲೆದಾಡಿದರೂ ಕೆಲಸ ಕೊಡದ ಜನರಿಂದ ಅವಮಾನದ ಮಾತುಗಳೊಂದಿಗೆ ಹಿಂದಿರುಗಿ ಎರಡು ಮೂರು ದಿವಸ ನೀರು ಕುಡಿದು ಮಲಗಿದಳು. ಕೆಲಸಕ್ಕಾಗಿ ದಿನವಿಡಿ ಅಲೆದಾಡಿ ಬೆಸತ್ತು ಕುಸಿದು ಕುಂತು ಈ ಜನ್ಮದಾಗ ಕೆಲಸ ಸಿಗುವುದಿಲ್ಲ ಎಂದು ಕಣ್ಣುಗಳಲ್ಲಿ ನೀರು ಸುರಿಸುತ್ತಿರುವಾಗ ರೈಲ್ವೆ ಸ್ಟೇಷನ್ನಿನ ಆಜುಬಾಜು ಬಯಲಿನಲ್ಲಿ ಕಳ್ಳ ಧಂದೆಯಲ್ಲಿ ತೊಡಗಿದ ನಾಲ್ಕು ಜನರಲ್ಲಿ ವಚ್ಚಾ ಸುಮ್ಮನ ನಾ ಹೇಳ್ದಾಂಗ ಕೇಳು, ಈಗ ಮೂರು ದಿನ ಆಯ್ತು, ಉಪವಾಸ ಬಿದ್ದು ಸಾಯ್ಬೇಕಂತ ಮಾಡಿಯೇನು ಮತ್ತ? ಈಗಾ ನನ್ನ ಬಲ್ಲಿ ಪನ್ನಾಸು ರುಪ್ಯ ಆವಾ... ಕೈಗಡಾ ಅಂತ ತೊಗೊಂಡು ಹುವ್ವಾ ಮಾರಾ ಧಂಧಾ ಚಾಲು ಮಾಡು. ಆ ಮ್ಯಾಲ ನನ್ನ ರೂಪೈ ವಾಪಾಸ ಕುಡು ಆಯ್ತಾ? ಎಂದಾಗ ಒಪ್ಪಿಕೊಂಡು ಧಂಧಾ ಚಾಲು ಮಾಡಿದಳು. ಹೀಗೆ ದಿನಾಲು ಹೂ ಮಾರುವ ಧಂಧಾ ಮಾಡುತ್ತ ಬಂದ ಹಣದಲ್ಲಿ ವಚ್ಚಾನ ಪನ್ನಾಸ ರೂಪೈ ವಾಪಸ ಕೊಟ್ಟು ಉಳಿದ ಹಣದಲ್ಲಿ ತಾರಫೈಲ್‌ನಲ್ಲಿ ಒಂದು ಗುಡಿಸಲು ಬಾಡಿಗೆ ತೊಗೊಂಡು ಕುಂಟ ಬಸಪ್ಪ ಮುತ್ತ್ಯಾನನ್ನು ಭೀಕ್ಷೆ ಬೇಡುವುದನ್ನು ಬಿಡಿಸಿ ಅವನ ಬೀಡಿ ಕಟ್ಟಿಗಾಗಿ ದಿನಾಲು ಎಂಟಾಣೆ ಕೊಡುತ್ತಾ ಸಲುಹುತ್ತಿದ್ದಳು.

ಹೀಗೆ ಧಂಧಾ ಮಾಡುತ್ತ ಜೀವನ ಸಾಗಿಸುತ್ತಿರುವಾಗ ಹರೆಯಕ್ಕೆ ಬಂದ ಕಜರಿಯ ಮೇಲೆ ಹರೆಯದ ಹುಡುಗರು ಕಣ್ಣು ಹಾಕಿ ಕೆಣಕಿ ಬೈಸಿಕೊಂಡಿದ್ದು ಇದೆ. ನಾನು ಕಳ್ಳರನ್ನು, ಸೋಮಾರಿಗಳನ್ನು, ಮೋಸದಿಂದ ಬಂದ ಹಣದಿಂದ ಜೀವನ ಮಾಡುವವರನ್ನು ಮದುವೆಯಾಗುವುದಿಲ್ಲ, ಮೈಮುರಿದು ದುಡಿದು ತಿನ್ನುವ ಮಾನ ಮರ್ಯಾದೆಗೆ ಅಂಜಿ ಜೀವನ ಮಾಡುವವರನ್ನು ಮದುವೆಯಾಗುವುದಾಗಿ ಹೇಳಿ ಪಡ್ಡೆ ಹುಡುಗರನ್ನು ಬೈದು ಕಳುಹಿಸಿದಳು.

ದಿನಾಲು ಬೆಳಗ್ಗೆ ಹೂ ತರಲು ಹೋಗುವಾಗ ಕೋತಿ ಆಟ ಆಡಿಸುವ ರುಕ್ಯಾನ ಗುಡಿಸಿಲಿನ ಮುಂದಿನಿಂದ ಹಾದು ಹೋಗುವಾಗ ನೋಡುತ್ತಾ, ಮಾತನಾಡಿಸುತ್ತಾ ರುಕ್ಯಾನ ಗುಣ, ಸ್ವಾಭಿಮಾನದ ಮಾತುಗಳಿಗೆ ಮಾರು ಹೋದಳು ಹೀಗೆ ಇಬ್ಬರ

ಮಧ್ಯೆ ಪ್ರೇಮ ಭಾವನೆ ಮೂಡಿ ದಿನಾಲು ಇಬ್ಬರೂ ಭೇಟಿಯಾಗುತ್ತಿದ್ದರು. ಜೊತೆಗುಡಿ ಸುತ್ತಾಡುವುದು ಸುತ್ತಮುತ್ತಲಿನ ಗುಡಿಸಿಲಿನ ಜನರಿಗೆಲ್ಲ ಗೊತ್ತಾಗಿದ್ದಾಗ, ತಡಮಾಡುವುದು ಬೇಡ ಎಂದು ಒಂದು ದಿನ ಮದುವೆ ನಿಶ್ಚಯ ಆಯಿತು. ಮುಂದಿನ ಸೋಮವಾರ ಬೆಳಗ್ಗೆ ಹಣಮಂದೇವರ ಗುಡಿಯ ಮುಂದೆ ಮದುವೆಯಾಗುವುದೆಂದು ತಿರ್ಮಾನಿಸಿದರು. ತನ್ನನ್ನು ಮದುವೆಯಾಗಲು ಹಿಂದೆ ಬಿದಿದ್ದ ಕಾಮ್ಯಾ, ವಚ್ಚ್ಯಾ, ಕರೀಮರಿಗೆಲ್ಲ ಮದುವೆಗೆ ಬರಲು ತಿಳಿಸಿದಳು. ಮದುವೆಯನ್ನು ನಿಶ್ಚಯಿಸಿದ ಹಿಂದಿನ ರಾತ್ರಿ ವಚ್ಚ್ಯಾ, ಕಾಮ್ಯಾ, ಕರೀಮ ಮೂವರು ಸೆರಿ ಕಜರಿಯ ಮನೆ ಬಾಗಿಲು ಭಾರಿಸಿ ಬಾಗಿಲು ತೆರೆಯುವಂತೆ ಹೇಳಿದಾಗ ಗಾಬರಿಯಿಂದ ಮುದುಕ ಕುಂಟ ಬಸಪ್ಪ ಬಾಗಿಲು ತೆರೆದಾಗ ಮುದುಕನನ್ನು ಒದ್ದು ಕಜರಿಯನ್ನು ಹೊತ್ತುಕೊಂಡು ಹೋಗಿ ಹಣಮಂದೇವರ ಗುಡಿಯ ಹಿಂದೆ ಅವಳ ಮಾನಭಂಗಕ್ಕೆ ಕೈ ಹಾಕಿದಾಗ ಬಿಡಿಸಿಕೊಳ್ಳಲು ಕಜರಿ ಮಾಡುವ ಸಂಘರ್ಷ ವಿಫಲವಾಗಿ ಅಸಹಾಯಕಳಾಗಿ ಶೀಲವನ್ನು ಕಳೆದುಕೊಂಡು ಹರಿದ ಸೀರೆ, ಕುಪ್ಪಸ, ಗಲ್ಲ; ಎದೆ, ತುಟಿಗಳಿಗೆಲ್ಲ ಕಂದುಗೊಂಡು, ನೆತ್ತರು ಸೋರಾಡುತಿತ್ತು. ಉಸಿರಾಡದಂತೆ ಬಾಯೊಳಗೆ ಬಟ್ಟೆ ತುರುಕಿ ಬಳಸಿ ಬೀಸಾಡಿ ಹೋಗುವರು. ಬೆಳಗಾದರೆ ಮದುವೆಯಾಗಬೇಕಾದ ದಿನ. ಅದೇ ಹಣಮಂದೇವರ ಗುಡಿಯಲ್ಲಿ ಸಿಂಗಾರಗೊಂಡು ಮದುಮಗಳಾಗಿ ಹೊಸ ಜೀವನಕ್ಕೆ ಕಾಲಿಡಬೇಕಾದ ಕಜರಿ ತನ್ನ ಶೀಲವನ್ನು ಕಳೆದುಕೊಂಡು ತನ್ನ ಮಾಸಿದ ಮೈಯೊಂದಿಗೆ ಅರೆಬೆತ್ತಲೆಯಾಗಿ ನರುಳುತ್ತ ಬಿದ್ದಿರುವಾಗ ಮದುಮಗ ತನಗೆ ಬೇಕಾದವರ ಜೊತೆ ಹಣಮಂದೇವರ ಗುಡಿಗೆ ಬಂದು ನೋಡಿದಾಗ ನರುಳುತ್ತಾ ಬಿದ್ದಿರುವ ಕಜರಿಯ ಸ್ಥೀತಿಯನ್ನು ಕಂಡು ದುಖಃತಪ್ತನಾಗಿ ಗರಬಡಿದವನಂತಾಗಿ ಬಾಯಿಂದ ಮಾತು ಬರದ ಮೂಗನಂತೆ ಅವಳತ್ತ ಓಡಿ ಹೋಗಿ ತಬ್ಬಿಕೊಂಡು ತನ್ನ ತೊಡೆಯ ಮೇಲೆ ಕಜರಿಯನ್ನು ಮಲಗಿಸಿಕೊಂಡು ಇದಕ್ಕೆಲ್ಲ ಯಾರು ಕಾರಣ ಎಂದು ಕೇಳಿದಾಗ ವಚ್ಚ್ಯಾ, ಕಾಮ್ಯಾ, ಕರೀಮರ ಹೆಸರು ಹೇಳುತ್ತಲೇ ಝಕ್ಯಾನ ತೊಡೆಯ ಮೇಲೆ ಜೀವ ಬಿಡುವಳು. ಹೊಸಜೀವನಕ್ಕೆ ಕಾಲಿಡಬೇಕಾದ ಕಜರಿಯ ಕನಸು ಕನಸಾಗಿಯೇ ಉಳಿಯುವುದು. ಬೇಡಿಕೊಂಡು ಊಂಡರೆ ನಾಯಿಗೊಳ ಕಾಟ, ಮಾಡಿಕೊಂಡು ಊಂಡರೆ ಮಂದಿ ಕಾಟ ಎಂಬಂತೆ ಈ ಕಥೆಯನ್ನು ಓದಿದಾಗ ಈ ಮಾತು ನಿಜವೆಂದು ಅನಿಸದೆ ಇರದು. ಹೆಣ್ಣು ಹೊಟ್ಟೆಗಾಗಿ, ಜೀವನಕ್ಕಾಗಿ, ಪ್ರೀತಿಗಾಗಿ, ಸ್ನೇಹಕ್ಕಾಗಿ ಹೀಗೇ ಪ್ರತಿಯೊಂದನ್ನು ಪಡೆಯುವಲ್ಲಿ ಆಕೆಯ ಬದುಕು ಹುಟ್ಟಿನಿಂದ ಸಾಯುವವರೆಗೂ ಸಂಘರ್ಷದಿಂದಲೇ ಸಾಗುತ್ತಿರುವಾಗ ಹೆಣ್ಣು ಸಬಲೆಯಾಗುವುದು ಯಾವಾಗ ಎಂಬುದನ್ನು ಈ ಕಥೆಯಲ್ಲಿ ಕಥೆಗಾರ್ತಿ ಪ್ರಶ್ನಿಸುತ್ತಾರೆ.

ಗೀತಾ ನಾಗಭೂಷಣರವರು ಗ್ರಾಮೀಣ ಪ್ರದೇಶದ ದಲಿತ ಕುಟುಂಬದಿಂದ ಕಷ್ಟದಲ್ಲಿಯೇ ಬೆಳೆದು ಬಂದಿರುವುದರಿಂದ ಗ್ರಾಮೀಣ ತಮ್ಮ ಸುತ್ತಮುತ್ತ ನಡೆಯುವ ಹತ್ತು ಹಲವು ಜಟೀಲ ಸಮಸ್ಯೆಗಳನ್ನು ತಮ್ಮ ಕಥೆಗಳಲ್ಲಿ ಒಂದು ರೂಪಕೊಟ್ಟು ಓದುಗಲೋಕಕ್ಕೆ ಕೊಟ್ಟಿದ್ದಾರೆ. “ಸಮಾಜದ ಆಶೋತ್ತರಗಳನ್ನು ಪ್ರತಿನಿಧಿಸಿ ಪ್ರತಿಬಿಂಬಿಸುವ ಒಬ್ಬ ಸಮಾಜಜೀವಿ ಸಾಹಿತಿ, ಸಾಹಿತಿಯಾದರೂ, ಸಮಾಜದ ಒಂದು ಅಂಗ ಆತ ಅದರ ಆಗುಹೋಗುಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಸಾಮಾಜಿಕ ಪರಿಸರವು ಆತನ ಮೇಲೆ ಸಾಕಷ್ಟು ಪ್ರಭಾವ ಬೀರುತ್ತಿರುತ್ತದೆ. ಸಾಹಿತಿ ಸಂವೇದನಾಶೀಲನಾಗಿರುವುದರಿಂದ ಸಮಾಜದಲ್ಲಿ ನಡೆಯುತ್ತಿರುವ ಎಲ್ಲ ಕ್ರಿಯೆಗಳಿಗೆ ಬಹುಬೇಗ ಸ್ಪಂದಿಸುತ್ತಾನೆ. ಬರಹದ ಮೂಲಕ ಅಭಿವ್ಯಕ್ತ ಪಡಿಸುತ್ತಾನೆ”[೪]

‘ಕಮರಿ ಹೋಗುವ ಕೆಳಜನರು’ ಎಂಬ ಕಥೆಯು ಪ್ರೇಮಿಗಳಿಬ್ಬರನ್ನು ದೂರ ಮಾಡುವ ಹುನ್ನಾರವನ್ನು ಮೇಲ್ಜಾತಿಯ ಜನರು ಹೇಗೆ ಮಾಡುತ್ತಾರೆ ಮತ್ತು ಅದನ್ನು ಯಾರಿಗೂ ಗೊತ್ತಾಗದ ಹಾಗೇ ಚಾಣಾಕ್ಷತನದಿಂದ ಮಾಡುವುದನ್ನು ಕರಗತಮಾಡಿಕೊಂಡಿದ್ದು, ಬಡವರ ಪ್ರಾಣಕಿಂತ ತಮ್ಮ ಮನೆತನದ ಗೌರವವೇ ಹೆಚ್ಚು ಎಂಬುದನ್ನು ಈ ಕಥೆಯಲ್ಲಿ ಕಾಣಬಹುದು. ಈ ಕಥೆಯಲ್ಲಿ ಬರುವಂತ ಕುರುಬರ ಅನಾಥ ಶಿವು ತಾನು ಆಳಾಗಿ ದುಡಿಯುತ್ತಿದ್ದ ಚೆಂಬಸಪ್ಪ ಗೌಡನ ಮಗಳು ಗಂಗಾ ನಾಗರಪಂಚಮಿ ಹಬ್ಬದ ದಿನ ಹೊಲಕ್ಕೆ ನೈವೆದ್ಯ ಕೊಡಲು ಒಬ್ಬಳೆ ಹೊಲಕ್ಕೆ ಬಂದಾಗ, ಅಲ್ಲಿದ್ದ ಶಿವುನನ್ನು ತನ್ನ ಜೊತೆಗೆ ಕರೆದು ತಮ್ಮ ಹಿರಿಯರ ಗೋರಿಗಳಿಗೆ ನೈವೆದ್ಯ ಕೊಡು ನಾನು ಹುತ್ತಿಗೆ ಹಾಲೆರೆದು ಬರುವೆನೆಂದು ಹೇಳಿ ಹುತ್ತಿನತ್ತ ಹೋದಾಗ ಹುತ್ತಿನೊಳಗಿನ ಹಾವು ಗಂಗಾಳ ಕೈಗೆ ಕಚ್ಚುತ್ತೆ ಆಗ ಚಟ್ಟನೆ ಚಿರಿ ಪ್ರಜ್ಞೆ ತಪ್ಪಿ ನೆಲಕ್ಕುರಳುವಳು. ಆಗ ಧಾವಿಸಿ ಬಂದ ಶಿವು ಅವಳನ್ನು ಎದೆಗೆ ಅಪ್ಪಿಕೊಂಡು ಕೈಗೆ ಕಚ್ಚಿದ ಹಾವಿನ ವಿಷವನ್ನು ಬಾಯಿಂದ ಕಚ್ಚಿ ಹೊರಹಾಕಿದ ನಂತರ ಕಣ್ತೆರೆದ ಗಂಗಾಳಿಗೆ ತನ್ನ ಜೀವದ ಹಂಗು ತೊರೆದು ಜೀವ ಉಳಿಸಿದ ಶಿವುನ ಮೇಲೆ ಪ್ರೇಮಭಾವನೆ ಮೂಡುತ್ತದೆ. ಒಂದು ದಿನ ಹೊಲಕ್ಕೆ ಹೋದಾಗ ತಾನು ಪ್ರೀತಿಯನ್ನು ಮಾಡುವುದಾಗಿ ಹೇಳುತ್ತಾಳೆ. ಆಗ ಶಿವೂ ನಾನು ಎಲ್ಲಿ ನೀವು ಎಲ್ಲಿ ನಿಮ್ಮೊಂದಿಗೆ ಪ್ರೀತಿ ಮಾಡುವ ಯೋಗ್ಯತೆ ನಮಗಿಲ್ಲ ಎಂದರೂ ಕೇಳದ ಗಂಗಾ ಮೈಮುಟ್ಟುವುದು, ತಬ್ಬಿಕೊಳ್ಳುವುದು ಮಾಡುತ್ತಿದ್ದಾಗ ಸುಮ್ಮನಾದ. ದಿನಗಳೆದಂತೆ ಇಬ್ಬರಲ್ಲಿಯೂ ಪ್ರೇಮ ಮೊಳಕೆಯೊಡೆದು ಬೆಳೆಯಿತು, ಬಲಿಯಿತು. ತೋಟ, ಹೊಲ, ಹೊಳೆ, ಗುಡ್ಡ ಮಾವಿನ ಮರದ ಕೆಳಗೆ ಹೀಗೆ ಎಲ್ಲೆಂದರಲ್ಲಿ ಭೇಟಿಯಾಗುವ ಸುದ್ಧಿ ಮನೆಯಲ್ಲಿ ಗೊತ್ತಾದಾಗ, ನೆರೆಹಳ್ಳಿಯ ಈರಣ್ಣನೊಂದಿಗೆ ಒತ್ತಾಯಪೂರ್ವಕವಾಗಿ ಮದುವೆ ನಿಶ್ಚಯಿಸಿದರು, ಮದುವೆಗೆ ಒಪ್ಪದಿದ್ದರೆ ಶಿವುನನ್ನು ಕೊಲೆ ಮಾಡುವ ಬೆದರಿಕೆ ಹಾಕಿ ಮದುವೆ ಮಾಡಿ ಕಳುಹಿಸುವರು. ಶಿವು ನನಗೆ ಸಿಗದಿದ್ದರೂ ಪರವಾಗಿಲ್ಲ ಜೀವಂತವಾಗಿ ಬದುಕಿದ್ದರೆ ಸಾಕೆಂದು ಗಂಗಾ ಒಲ್ಲದ ಮನಸ್ಸಿನಿಂದ ಗಂಡನ ಮನೆ ಸೇರಿದಳು. ವಾರದ ನಂತರ ‘ಗಂಗಾ...ನಿನ್ನ ತವರು ಮನಿ ಆಳು ಮಗ ಶಿವೂ ಅಂತ ಯಾರೋ.... ಸೆರಿ ಕುಡ್ದು ಸತ್ತನಂತ ಮನ್ನಿ’ ಎಂಬ ಸುದ್ಧಿ ಕೇಳಿ ಎದೆಗೆ ಬೆಂಕಿ ಹಚ್ಚಿದಂಗಾದ ಗಂಗಾಳು ತವರು ಮನೆಗೆ ಧಾವಿಸಿ ಅತ್ತು ಕರೆಯುವುದು ಮಾಡಿದ ಮೇಲೆ ಅಜ್ಜಿಯ ಹತ್ತಿರ ಸಾವಿಗೆ ಕಾರಣ ಕೇಳಿದಾಗ ನಿನ್ನ ಅಣ್ಣ ಸೆರಿಯೊಳಗೆ ವಿಷ ಬೆರೆಸಿ ಕುಡಿಸಿ ಸಾಯಿಸಿದನೆಂಬ ಸತ್ಯ ತಿಳಿದ ಗಂಗಾ ‘ಶಿವೂಂದೇನು ತಪ್ಪಿರಲಿಲ್ಲ ಆಯಿ....ನಾನೇ ಮ್ಯಾಲ ಬಿದ್ದು ಅಂವಗ ಪಿರೀತಿ ಮಾಡಿದ್ದು. ಅಣ್ಣ ನನಗ ಕೊಲ್ಲಬೇಕಾಗಿತ್ತು. ಆದರ ತನ್ನ ತಂಗೀಗಿ ಉಳಿಸಿ ಪಾಪ ಏನು ತಪ್ಪಿಲ್ಲದ ಆಳುಮಗನ ಜಿಂವಾ ತಗೊಂಡು ಬಿಟ್ಟಾನ. ಇದು ಹಿಂಗೇ ಆಯೀ....ದೊಡ್ಡ ಕುಲದವರು ಮಾಡೋ ತೆಪ್ಪಗೊಳಿಗೆಲ್ಲಾ ಸಾಯೊದು ಮಾತ್ರ ಸಣ್ಣ ಕುಲದ ಭೋಳೇ ಮಂದಿನೇ....ಚೂಕ ಯಾರದಿದ್ದರೇನೂ ತೆಲಿ ಕೊಟ್ಟು ಜೀಂವಾ ಕಳಕೊಂಬಾದು ಈ ಕಮ್ ಜಾತಿ ಮಂದಿನೇ.... ಅಣ್ಣ ನನಗನೂ ಕೊಲ್ಬೇಕಾಗಿತ್ತು ಆಯಿ....’ ಎಂದು ಆಯಿಯ ಕೊರಳು ತಬ್ಬಿಕೊಂಡು ಅಳುವ ಘಟನೆಯು ಕಣ್ಣಿಗೆ ಕಟ್ಟುವಂತೆ ಇದೆ. ಮೇಲ್ಜಾತಿಯ ಗಂಡಸರು ಕೆಳಜಾತಿಯ ಹೆಣ್ಣುಗಳನ್ನು ಬಯಸಿ ಒಲ್ಲೆಂದರೆ ಎಳೆದುಕೊಂಡು ಹೋಗಿ ತಮಗೆ ಬೇಕಾದ ಹಾಗೇ ಬಳಸಿಕೊಂಡು ಬಿಸಾಡಿದರು ಬಾಯ್ತೆರೆಯುವಂತಿಲ್ಲ. ಆದರೆ ಮೇಲ್ಜಾತಿಯ ಹೆಣ್ಣು ಕೆಳಜಾತಿಯ ಪುರುಷರನ್ನು ತನ್ನ ಸ್ವ–ಇಚ್ಛೆಯಿಂದ ಬಯಸಿ ಬಂದರೂ ಗಂಡು ನಿರಾಕರಿಸುವ ಕೀಳರಿಮೆಯ ಮನೋಭಾವ ಇರುವುದರ ಜೊತೆಗೆ ತಪ್ಪಿಲ್ಲದಿದ್ದರೂ ಕೆಳಜಾತಿಯವರು ಹೇಗೆ ಬಲಿಯಾಗುತ್ತಾರೆ ಎಂಬುದನ್ನು ಇಲ್ಲಿ ಕಾಣಬಹುದು. ಮೇಲ್ಜಾತಿಯ ಹೆಣ್ಣು ಸಹ ಸ್ವತಂತ್ರವಾಗಿ ಜೀವಿಸುವ ಹಕ್ಕುಗಳಿಂದ ದೂರವಿದ್ದಾಳೆ. ಪ್ರೀತಿಸಿದವರನ್ನೇ ಮದುವೆಯಾಗುವ, ತನ್ನ ಬಾಳಸಂಗಾತಿಯನ್ನು ತಾನೇ ಆರಿಸಿಕೊಳ್ಳುವ ಸ್ವಾತಂತ್ರ್ಯ ಇನ್ನು ಸಹ ಸಿಕಿಲ್ಲ ಅದು ಸಿಕ್ಕರೂ ಕ್ವಚಿತ್ತಾಗಿ ಕಂಡು ಬರುತ್ತದೆ.

ಹೆಣ್ಣು ತವರು ಮನೆಯವರು ತೋರಿಸಿದ ಗಂಡಿನೊಂದಿಗೆ ಒಲ್ಲದ ಮನಸ್ಸಿದ್ದರೂ ತಲೆ ತಗ್ಗಿಸಿ ಸಂಸಾರ ಮಾಡಬೇಕಾಗಿದೆ. ಹೆಣ್ಣು ದಿನವಿಡಿ, ವರ್ಷವಿಡಿ, ಜೀವನದುದ್ದಕ್ಕೂ ಮಾನಸಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ಸಂಘರ್ಷ ಮಾಡುತ್ತಲೇ ಜೀವನ ಸವೆಸಬೇಕಾಗಿರುವುದು ಅನಿವಾರ್ಯವಾಗಿಬಿಟ್ಟಿದೆ.

"ಸಾವಿರಾರು ವರ್ಷಗಳಿಂದ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತುಳಿತಕ್ಕೊಳಗಾದ ಜನತೆಯ ಹಳ್ಳಿಯ ಕೆಳವರ್ಗದ ಜಾತಿ ಜನಾಂಗಗಳ ಶೋಷಿತ ಮಹಿಳೆಯರ ಬದುಕು ಬವಣೆಗಳು ದಾಖಲುಗೊಂಡವು ತಮ್ಮ ಪ್ರತಿಭೆಗೆ ಸವಾಲಾಗುವಂತಹ ಸಾಮಾಜಿಕ ಸಾಂಪ್ರದಾಯಿಕ ಚಿಕ್ಕಟ್ಟುಗಳನ್ನು ಎದುರಿಸಿ ದಮನಕ್ಕೊಳಗಾದವರ ಸಂವೇದನೆಗಳನ್ನು ತಮ್ಮ ಕಥೆ ಕಾದಂಬರಿಗಳ ಮೂಲಕ ಅಭಿವ್ಯಕ್ತಿಸಿದ ಕೆಳವರ್ಗದ ಲೇಖಕಿ ಗೀತಾನಾಗಭೂಷಣವರು ಮೊದಲ ತಲೆಮಾರಿನ ಪ್ರಮುಖರು"೫

ಒಟ್ಟಾರೆಯಗಿ ಹೇಳುವುದಾದರೆ ಗೀತಾನಾಗಭೂಷಣರವರು ತಮ್ಮ ಸುತ್ತಮುತ್ತಲಿನ ನೈಜ್ಯ ಘಟನೆಗಳು ಘಟಿಸಿವೆ ಎನ್ನುವಂತೆ ಇವೆ. ಇದ್ದರೂ ಇರಬಹುದು ಎನಿಸದೆ ಇರದು. ಅವುಗಳನ್ನೆ ಬಳಸಿಕೊಂಡು ತಮ್ಮ ಕಥೆಗೆ ವಸ್ತುವನ್ನಾಗಿಸಿಕೊಂಡು, ಪಕ್ಕಾ ಜವಾರಿ ಹೈದ್ರಾಬಾದ ಕರ್ನಾಟಕದ ಗ್ರಾಮೀಣ ಪ್ರದೇಶದ ಭಾಷೆಯನ್ನು ಬಳಸಿಕೊಂಡು ಕಥೆಗಳನ್ನು ಬರೆದಿರುವುದನ್ನು ಕಂಡುಬರುತ್ತದೆ. ಇಂದಿಗೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಇಂಥಹ ಕ್ರೂರ ಘಟನೆಗಳು ಸಾಕಷ್ಟು ಕಾಣಸಿಗುತ್ತವೆ. ನಗರ ಪ್ರದೇಶಕ್ಕೂ ಈ ಮಾತು ಹೊರತಾಗಿಲ್ಲ. ಪ್ರಸ್ತುತ ಕಾಲದಲ್ಲಿಯೂ ಹಾಡಹಗಲೆ ಮಹಿಳೆ ಮೇಲೆ ಅತ್ಯಾಚಾರ, ಕೊಲೆ, ಅಪಹರಣ, ಎಸಿಡ್ ಎರಚುವಂಥ ಪ್ರಕರಣಗಳು ತಾಂಡವಾಡುವುದನ್ನು ಟಿ.ವಿ, ಪತ್ರಿಕೆಗಳಲ್ಲಿ ಕಾಣುತ್ತೇವೆ.

ಗ್ರಾಮೀಣ ಪ್ರದೇಶಗಳ ಕೆಳವರ್ಗದವರ ಕುರಿತಾಗಿ ಕಥೆಗಳನ್ನು ಬರೆಯುವುದರ ಮೂಲಕ ಗೀತಾ ನಾಗಭೂಷಣರವರು ಕೆಳವರ್ಗದವರ ಜೀವನಕ್ರಮ, ಉಳ್ಳವರು ಇಲ್ಲದವರನ್ನು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದರ ಮೇಲೆ ಬೆಳಕನ್ನು ಚೆಲ್ಲುತ್ತಾರೆ ಮತ್ತು ಓದುಗ ಲೋಕಕ್ಕೆ ಪರಿಚಯಿಸುತ್ತಾ, ಅವರು ಹೇಳುವ ಮಾತುಗಳನ್ನು ನೇರವಾಗಿ ಇಲ್ಲಿ ದಾಖಲಿಸಲಾಗಿದೆ "ಕಥೆ ಕಾದಂಬರಿ ಬರೆಯುವುದ್ದರಿಂದ ಈ ಮಂದಿಯ ಬಾಳು ಹಸನಾಗುವುದಿಲ್ಲ ಅಂತ ನನಗೆ ಗೊತ್ತು, ಆದರೂ ಇವರ ಬದುಕಿನ ಕತ್ತಲೆಯನ್ನು ಎತ್ತಿ ತೋರಿಸಿ, ಎಲ್ಲಿಂದಾದರೂ, ಯಾರಿಂದಾದರು, ಯಾವ ಮೂಲೆಯಿಂದಾದರೂ ಒಂದೀಸು ಬೆಳಕಿನ ಕಿರಣಗಳು ಬರಬಹುದೇನೋ ಅನ್ನುವ ಸಣ್ಣ ಆಸೆ ನನ್ನದು" ಎಂದು ನುಡಿದಿರುವುದನ್ನು ಕಾಣುತ್ತೇವೆ.

ಈ ಮೇಲಿನ ಎಲ್ಲಾ ಕಥೆಗಳಲ್ಲಿ ಅತ್ಯಾಚಾರ, ಅನ್ಯಾಯ, ಅಪಮಾನ, ಮೋಸ, ವಂಚನೆಗಳಂಥ ಘಟನೆಗಳು ಸಂಬವಿಸುತ್ತವೆ ಎಂದರೆ ಅದಕ್ಕೆ ಕಾರಣ ಅನಕ್ಷರತೆ, ಬಡತನ, ಅನಾರೋಗ್ಯ, ಅಸಮಾನತೆ, ಲಿಂಗಭೇದ, ಮೇಲು-ಕೀಳು, ಮೌಢ್ಯತೆ, ಅನಿಷ್ಟ ಪದ್ಧತಿಗಳು ಹೀಗೆ ಹಲವಾರು ಕಾರಣಗಳಿರುವುದ್ದರಿಂದ ಇಲ್ಲಿ ಮಹಿಳೆಯು ಸ್ವತಂತ್ರವಾಗಿ ಜೀವಿಸಲು ಸಾಧ್ಯವಾಗುತ್ತಿಲ್ಲ. ಮಹಿಳಾ ಸಬಲೀಕರಣವಾಗಬೇಕಾದರೆ ಮಹಿಳೆಯರಿಗೆ ಶಿಕ್ಷಣ, ಸಮಾನತೆ, ಗೌರವ, ಮೂಲಭೂತ ಸೌಕರ್ಯಗಳು, ಸ್ವ ಉದ್ಯೋಗಕ್ಕಾಗಿ ಪ್ರೋತ್ಸಾಹಧನ ನೀಡಿ ಸಹಕರಿಸಿ ಎಲ್ಲರಂತೆ ತಾನು ಸಮಾನಳು ಎಂಬ ಭಾವನೆ ಮೂಡಿಸುವುದರ ಮೂಲಕ ಮಹಿಳೆಯನ್ನು ಸಬಲಳನ್ನಾಗಿ ಮಾಡಬಹುದಾಗಿದೆ ಎಂದು ಹೇಳಬಹುದು.

**ಅಡಿಟಿಪ್ಪಣಿಗಳು**

1. ಕಥನಕಲೆಯ ನೆಲೆಗಳು : ಡಾ. ಕರಿಗೌಡ ಬೀಚನಹಳ್ಳಿ ಡಾ. ರಾಜಶೇಖರ ನಿರಮಾನ್ವಿ, ನಾನು ನನ್ನ ಸಾಹಿತ್ಯ ಲೇಖನ ಗೀತಾನಾಗಭೂಷಣ ಪುಟ-೬೨
2. ಸ್ತ್ರೀವಾದ ಪರಿಕಲ್ಪನೆ : ನಾವಡ ಗಾಯತ್ರಿ ಎನ್.ಆರ್. ಎ.ಎಮ್.ಎಚ್. ಪ್ರಕಾಶನ ಕೋಟೇಶ್ವರ ದ.ಕ ೧೯೯೫ ಪು. ೪೯
3. ಗೀತಾ ನಾಗಭೂಷಣರವರ ಕಲಬುರ್ಗಿಯ ಸ್ಪಂದನ : ಡಾ. ಸರಸ್ವತಿ ಚಿಮ್ಮಲಗಿ ಪುಟ -೦೪
4. ತ.ರಾ.ಸು ಹಾಗೂ ಅವರ ಕಾದಂಬರಿಗಳು : ಡಾ.ಎಂ.ಎಸ್.ಪಾಟೀಲ. ಪುಟ ೨೬
5. ಗೀತಾನಾಗಭೂಷಣರವರ ಕಲಬುರ್ಗಿಯ ಸ್ಪಂದನ : ಡಾ. ಸರಸ್ವತಿ ಚಿಮ್ಮಲಗಿ ಪುಟ -೦೪